ಕೊಠಡಿಯನ್ನು ಬಿಡಬೇಕಾಗಿ ಬಂತು. ಗೌರಿಯ ಶಾಲೆಯನ್ನು ಅರ್ಧದಲ್ಲಿ ಬಿಡಿಸಲು ಒಪ್ಪದ ನನ್ನ ಮನಸ್ಸು ಒಂದಿಷ್ಟು ಹಣವನ್ನು ಸಮೀರನ ಕೈಯಲ್ಲಿ ಕೊಡಲು ಮುಂದಾಯಿತು,"ಸಮೀರ ನಾನೀಗ ಇರುವ ಕೊಠಡಿಯನ್ನು ಬಿಡುತ್ತಿದ್ದೇನೆ. ಯಾವ ಕಾರಣಕ್ಕೂ ಗೌರಿ ಶಾಲೆಗೆ ಹೋಗುವುದನ್ನು ನಿಲ್ಲಿಸ ಬಾರದು. ಅವಳ ಖರ್ಚಿಗೆ ಈ ಹಣ ಇಟ್ಟುಕೋ ಅವಳು ಚೆನ್ನಾಗಿ ಓದಲಿ. ನಾನೀಗ ಬೇರೆ ಕಡೆಗೆ ಹೋಗುತ್ತಿದ್ದೇನೆ" ಎಂದು ಹೇಳಿ ಸಮೀರನ ಕೈಗೆ ಒಂದಿಷ್ಟು ಹಣ ಕೊಟ್ಟು ಕೊಠಡಿಯನ್ನು ಖಾಲಿ ಮಾಡಿದೆ. ಕುಸುಮಿಗೆ ಹೇಳದೆ ಇರಲು ನನ್ನ ಮನಸ್ಸು ಕೇಳಲಿಲ್ಲ. ಅವಳಿಗೆ ಹೇಳಲೆಂದು ಹೋದಾಗ ನನ್ನ ಮಾತು ಕೇಳಿ ತುಂಬಾ ನೊಂದುಕೊಂಡಳು.

"ಇನ್ನು ಮ್ಯಾಕೆ ನೀವು ವ್ಯಾಪಾರ ಮಾಡೋಕೆ ಬರಹಂಗಿಲ್ಲ" ಎಂದಳು.

"ಹೌದು" ಎಂದೆ. ಕಣ್ಣು ಕೆಂಪಗೆ ಮಾಡಿಕೊಂಡಳು.

"ಎಂದಾದರು ಪುರುಸೊತ್ತು ಸಿಕ್ಕಾಗ ಇತ್ತ ಕಡೆಗೆ ಬರುತ್ತೇನೆ" ಎಂದೆ.

"ಹಂಗೆ ಮಾಡಿ" ಎಂದು ನನ್ನನ್ನು ಬೀಳ್ಕೊಂಡಳು. ಸ್ನೇಹಕ್ಕೆ, ಪ್ರೀತಿಗೆ ಬಂಧುಗಳಾಗ ಬೇಕೆಂದಿಲ್ಲ. ಜಾತಿಯ ಕಟ್ಟುಪಾಡು ಬೇಕಿಲ್ಲ. ಅಥವಾ ಒಟ್ಟಿಗೆ ಇರಬೇಕಿಂದಿಲ್ಲ. ಕುಸುಮಿ ಯಾರೋ ನಾನಾರೋ ಅವಳೋ ಗುಡಿಸಲುವಾಸಿ ನಾನಾದರೋ ವಿದ್ಯಾವಂತ ಹೇಗೆ ಹುಟ್ಟಿಕೊಂಡಿತು ಇಂಥದೊಂದು ಪವಿತ್ರ ಸ್ನೇಹ" ಎಂದುಕೊಳ್ಳುತ್ತಾ ಕೊಠಡಿಗೆ ವಾಪಸ್ಸಾದೆ. ಎರಡು ದಿನಗಳಲ್ಲಿ ಕೊಠಡಿ ಖಾಲಿ ಮಾಡಿ ಹೊರಟು ಬಿಟ್ಟೆ. ಹುಳಿಮಾವಿನಲ್ಲಿ ಒಂದು ಹಳೆ ಮನೆ ಖರೀದಿಸಿ ಅಪ್ಪ ಅಮ್ಮನನ್ನು ಕರೆಸಿಕೊಂಡೆ. ಕೆಲಸಕ್ಕೆ ವಿಧಾನಸೌಧಕ್ಕೆ ಬರಬೇಕಿತ್ತು. ಎರಡೆರಡು ಬಸ್ಸು ಹಿಡಿದು ಬರುವಷ್ಟರಲ್ಲಿ ದಿನ ಕಳೆದು ಹೋಗುತ್ತಿತ್ತು. ರಜಾದಿನಗಳಲ್ಲಿ ಎಲ್ಲಿಗೂ ಹೋಗಬೇಕು ಎನಿಸುತ್ತಿರಲಿಲ್ಲ. ಹೀಗೆ ಕಳೆದು ಹೋಗಿತ್ತು ಮೂರು ನಾಲ್ಕು ವರುಷ. ನನ್ನ ಮದುವೆಯೂ ಆಗಿತ್ತು. ರಜನಿ ಕೂಡ ಕೆಲಸದಲ್ಲಿದ್ದಳು. ವಾರದ ರಜೆಯನ್ನು ಆರಾಮವಾಗಿ ಕಳೆಯುವುದೇ ಅವಳಿಗೆ ಇಷ್ಟ. ಹೀಗಾಗಿ ನಾವೆಲ್ಲೂ ಹೋಗುತ್ತಿರಲಿಲ್ಲ. ಒಂದು ದಿನ ಇದ್ದಕ್ಕಿದ್ದಂತೆ ಕುಸುಮಿ ನೆನಪಿಗೆ ಬಂದಳು, ಗೌರಿ ಶಾಲೆಗೆ ಹೋಗುತ್ತಿದ್ದಾಳೋ ಇಲ್ಲವೋ ಒಮ್ಮೆ ನೋಡಿ ಬರೋಣ ಎನಿಸಿ ರಜನಿಗೆ ಹೇಳಿದೆ, ಅವಳು ಒಪ್ಪಿಕೊಂಡಳು. ಮನೆಯಲ್ಲಿ ತಿಂಡಿ ಮುಗಿಸಿ ನಾವು ಮಲ್ಲೇಶ್ವರ ಸೇರಿದಾಗ ಒಂದು ಗಂಟೆ ಆಗಿಹೋಗಿತ್ತು. ಮಲ್ಲೇಶ್ವರ ಹಳೆ ಬಡಾವಣೆಯಾದ್ದರಿಂದ ಅಂತಹದ್ದೇನು ಬದಲಾವಣೆ ಕಾಣಲಿಲ್ಲ. ನಾನು ಕುಸುಮಿಯ ಅಂಗಡಿಯ ಹತ್ತಿರ ರಜನಿಯನ್ನು ಕರೆದುಕೊಂಡು ಬಂದಾಗ ಅಲ್ಲಿ ಅಂಗಡಿ ಇರಲಿಲ್ಲ. ಮನೆಯವರು ಅಂಗಡಿ ಒಡೆದು ಕಾಂಪೌಂಡ್ ಕಟ್ಟಿಸಿದ್ದರು. ಅವರನ್ನೇ ಕೇಳಿದರೆ ಗೊತ್ತಾಗುತ್ತದೆ ಎಂದು ಅವರ ಮನೆಗೆ ಹೋದೆ.

ಕರೆಗಂಟೆ ಅದುಮಿದಾಗ ಬಾಗಿಲು ತೆಗೆದವಳು ಕುಸುಮಿ. ಅಚ್ಚರಿಯಿಂದ ಒಬ್ಬರನ್ನೊಬ್ಬರು ಕಣ್ಣರಳಿಸಿ ನೋಡುತ್ತಾ ನಿಂತು ಬಿಟ್ಟೆವು" "ಯಾರಮ್ಮ" ಎಂದು ಕೇಳುತ್ತ ಹಿಂದಿನಿಂದ ಗೌರಿ ಬಂದು ನಿಂತುಕೊಂಡಳು. ಈ ಮೊದಲು ನಾನವಳನ್ನು ನೋಡಿರಲಿಲ್ಲ. ಅವಳ ನಗುಮುಖ, ಅವಳು ಧರಿಸಿದ್ದ ಬಟ್ಟೆಬರೆ ನೋಡಿ ಇವಳು ಕುಸುಮಿಯ ಮಗಳೆ ಎಂದು ಅಚ್ಚರಿಪಟ್ಟೆ.

"ಅಯ್ಯ ಇವ್ಳು ನನ್ನ ಮಗ್ಳು ಗೌರಿ, ಬನ್ನಿ ಸ್ವಾಮಿ ಒಳಿಕ್ಕೆ" ಕುಸುಮಿ ಒಳಗೆ ಕರೆದಳು.

ನಾನು ಮಾತನಾಡದೆ ರಜನಿಯ ಜೊತೆಗೆ ಒಳಗೆ ನಡೆದೆ.

"ಈ ಮನೇನ ನಾವೇ ಕೊಂಡ್ಕೊಂಡ್ವಿ ಸಾಮಿಯಾರ, ಮನೆಯೋರು ಮಾರ್ಕಂಡು ಪರದೇಶಕ್ಕೆ ಹೊಂಟೋದ್ರು. ಸ್ವಲ್ಪ ಸಾಲ ಐತೆ ತೀರ್ಸ್ಕತೀವಿ. ನಾಲ್ಕು ಹೆಜ್ಜೆ ಮುಂದೋದ್ರೆ ನಮ್ಮಂಗ್ಡಿ ಐತೆ. ಸಮೀರ ನೋಡ್ಕತವ್ನೆ. ಅವ್ನಿಗೆ ನನ್ನ ಮಗ್ಳು ಗೌರಿನ ಕೊಟ್ಟು ಮದುವೆ ಮಾಡಿವ್ನಿ. ನಿಮ್ಮ ಆಸೆಯಂತೆ ನನ್ನ ಮಗ ಓದ್ತವ್ನೆ. ನಡೀರಿ ನೀವು ನಮ್ಮ ಮನೆಯಾಗ ಉಣ್ಣಾಂಗಿಲ್ಲ ತಿನ್ನಾಂಗಿಲ್ಲ. ಅಂಗ್ಡೀಲಿ ಸಮೀರ ಕುಂತವ್ನೆ. ಅವ್ನ ಒಮ್ಮೆ ಕಂಡು ಕಾಯಿಪಲ್ಲೆ ತಗೊಂಡು ಹೋಗೋರಂತೆ ಎಂದು ಕುಸುಮಿ ತಲೆ ಮೇಲೆ ಸೆರಗು ಹೊದ್ದುಕೊಂಡು ಅಂಗಡಿ ತೋರಿಸಲು ನಮ್ಮೊಡನೆ ಹೊರಟು ನಿಂತಳು. ■

# ಮರಳಿ ಗೂಡಿಗೆ

■ ಆರ್. ಸುನೀಲ್ ತರೀಕೆರೆ

ಮುಳುಗುತ್ತಿರುವ ಸೂರ್ಯನನ್ನು ಹಾಗೇ ತದೇಕಚಿತ್ತದಿಂದ ನೋಡುತ್ತಿದ್ದೆ. ಮುಳುಗುವಂತೆ ಕಾಣುವ ಸೂರ್ಯ ಮತ್ತೆಲ್ಲೋ ಬೆಳಗಲು ಹೊರಟು ನಮಗೆ ಮುಳುಗುವ ಭ್ರಮೆಯನ್ನು ಹುಟ್ಟಿಸಿದ್ದ. ನಮ್ಮ ಕಣ್ಣು ನಮ್ಮನ್ನೇ ಎಷ್ಟು ಮೋಸ ಮಾಡುತ್ತದಲ್ಲವೇ ಎಂದೆನಿಸಿತು. ಒಮ್ಮೊಮ್ಮೆ ಯಾವುದು ಸತ್ಯವೆಂದು ತಿಳಿದಿರುತ್ತೇವೋ ಅದೇ ಸುಳ್ಳಾಗಿ ನಮ್ಮನ್ನ ಸಂಧಿಗ್ದತೆಗೆ ದೂಡಿ ಬಿಡುತ್ತದೆ. ಏನೋ ಬೇಕೆಂದು ಹಂಬಲಿಸಿ ಇರುವ ಕಡೆ ಬಿಟ್ಟು ಇನ್ನೆಲ್ಲೋ ಹುಡುಕುತ್ತಿರುತ್ತೇವೆ. ಆ ಹುಡುಕುವ ಧಾವಂತದಲ್ಲಿ ನಮಗೆ ಸಿಗಬೇಕಾದ್ದು ತಪ್ಪಿ ಹೋದ ತಕ್ಷಣ ನಾವು ಗೊಂದಲಕ್ಕೆ ಬಿದ್ದು ಬಿಡುತ್ತೇವೆ. ಆ ಭಗವಂತ ನಮ್ಮ ಜೀವನದಲ್ಲಿ ಎಷ್ಟೊಂದು ತಿರುವುಗಳನ್ನು ಇಟ್ಟಿದ್ದಾನೆ, ಸಿಕ್ಕಿದ್ದು ನಂದೋ ಅಥವಾ ಸಿಗದಿದ್ದುದು ನಂದೋ ಒಂದೂ ಅರ್ಥವಾಗುವುದಿಲ್ಲ. ಗಡಿಯಾರ ಗಂಟೆ ಹನ್ನೊಂದಾಯಿತು ಎಂದು ಎಂದಿನಂತೆ ಬಡಿದುಕೊಳ್ಳಲಾರಂಭಿಸಿತು. ಒಂಭತ್ತು ಸರಿಯಾಗಿ ತನ್ನ ಆಹಾರವನ್ನು ಕೇಳುವ ಹೊಟ್ಟೆಯೂ ಇಂದು ತನ್ನ ಹಸಿವಿನ ವೇಳೆ ಮೀರಿದರೂ ಅದರ ಕಡೆಗೆ ಗಮನ ಕೊಟ್ಟಿರಲಿಲ್ಲ. ಸಿಗರೇಟು ಮಾತ್ರ ಬರಗಾಲದಲ್ಲೂ ಸುಭಿಕ್ಷ ಕಾಲದಲ್ಲೂ ನಾ ನಿನ್ನ ಜೊತೆ ಬಿಡೆನು ಎಂಬಂತೆ ಬೆರಳುಗಳ ನಡುವೆ ಸುಡುತ್ತಾ ಹೊಗೆಯುಗುಳುತಿತ್ತು!

ಸೂರ್ಯನ ಕಿರಣಗಳು ಕಣ್ಣ ರೆಪ್ಪೆಯ ಮೇಲೆ ಬಿದ್ದು ಕೆಂಪಾದ ಪರದೆಯನ್ನು ಕಣ್ಣೊಳಗೆ ಮೂಡಿಸ ತೊಡಗಿದವು. ಪ್ರಯಾಸದಿಂದ ಕಣ್ತೆರೆದೆ. ಸುಡುವ ಬಿಸಿಲು ರಪ್ಪನೆ ನನ್ನ ಕಣ್ಣಿಗೆ ಹೊಡೆಯುತ್ತಿತ್ತು. ರಾತ್ರಿ ಮಹಡಿ ಮೇಲೆ ಹಾಗೆಯೇ ಕುರ್ಚಿಯಲ್ಲಿ ಯೋಚನೆ ಮಾಡುತ್ತಾ ಕುಳಿತವನಿಗೆ ಅದ್ಯಾವಾಗ ನಿದ್ರೆ ಹತ್ತಿತೋ ತಿಳಿಯಲಿಲ್ಲ! ಗಡಿಯಾರದ ಕಡೆಗೆ ನೋಡಿದೆ ಹತ್ತು ಗಂಟೆ...! ಅರೆರೆ ಇತ್ತೀಚೆಗೇಕೋ ನನ್ನ ಮೇಲೆ ನನಗೇ ಪರಿವೆ ಇಲ್ಲವಲ್ಲ ಅಂತ ಅನ್ನಿಸತೊಡಗಿತು. ಕಣ್ಣುಜ್ಜಿಕೊಂಡು ಕಾಫಿಯಾದ್ರು ಕುಡಿಯೋಣ ಅಂತ ಎದ್ದು ಅಡುಗೆ ಮನೆಯ ಕಡೆ ಹೊರಟೆ ಯಾಕೋ ಕಾಫಿ ಮಾಡಿಕೊಳ್ಳಲು ನನ್ನ ಆಯಾಸ ಆಲಸ್ಯ ಸಹಾಯ ಮಾಡಲಿಲ್ಲ. ಹೋಟೆಲಿನಲ್ಲಿ ಕುಡಿದರಾಯಿತು ಎಂದುಕೊಂಡು ಸ್ನಾನ ಮಾಡಲು ಹೊರಟೆ.

‘ಯಾಕೋ ಈ ನಡುವೆ ಆಫೀಸಿಗೆ ಲೇಟಾಗಿ ಬರ್‍ತಾ ಇದೀಯಾ..?’ ತಡವಾಗಿ ಬಂದ ನನಗೆ ಗೆಳೆಯ ಪ್ರಶ್ನೆ ಕೇಳುತ್ತಲೇ ಸ್ವಾಗತಿಸಿದ. ಅವನು ರಾಜೇಶ್ ಕಾಲೇಜಿನ ಹಳೇ ಗೆಳೆಯ. ನಾನು ಅವನು ಸೇರಿ ಒಂದು ಸಣ್ಣ ಮಾರ್ಕೆಟಿಂಗ್ ಕಂಪೆನಿಯನ್ನು ನಡೆಸುತ್ತಿದ್ದೆವು. ‘ರಾತ್ರಿ ಮಲಗಿದ್ದು ಲೇಟಾಯ್ತು ಕಣೋ..? ಅದ್ಯಾವಾಗ ಮಲಗಿದೆನೋ ಗೊತ್ತಾಗಲಿಲ್ಲ... ಬೆಳಿಗ್ಗೆ ಎದ್ದು ನೋಡ್ತೇನೆ ತುಂಬಾ ತಡವಾಗಿತ್ತು... ಬೇಜಾರಾಗಬೇಡ...’ ಅಂದೆ ಅವನನ್ನು ಸಮಾಧಾನಪಡಿಸಲು.

‘ಅದೆಲ್ಲಾ ಇರಲಿ ಅದ್ಯಾಕೋ ಇತ್ತೀಚೆಗೆ ನೀನು ಮೊದಲಿನಂತಿಲ್ಲಪ್ಪ...! ಅಪ್ಪ ತೀರಿಕೊಂಡು ಎರಡು ತಿಂಗಳಾಯ್ತು... ಇನ್ನೂ ಆ ಗುಂಗಿನಿಂದ ನೀನು ಹೊರಬಂದಿಲ್ಲ ಅಂತ ಕಾಣುತ್ತೆ...?’ ನನ್ನ ದೈನಂದಿನ ಕೆಲಸಗಳ ನಿರಾಸಕ್ತಿಗೆ ಇದೇ ಕಾರಣವೆಂಬಂತೆ ಕೇಳಿದ. ಮೌನಕ್ಕೆ ಜಾರಿದೆ. ಹೃದಯದ ಒಳಗೆ ನೋವಿನ ಹಕ್ಕಿ ತೊದಲ ತೊಡಗಿತು. ಎದ್ದು ಕಿಟಕಿಯೆಡೆಗೆ ಮುಖ ಮಾಡಿ ನಿಂತೆ. ಅವನೂ ಕೂಡ ನನ್ನ ನೋವನ್ನು ಅರ್ಥ ಮಾಡಿಕೊಂಡವನಂತೆ ಮಾತು ಮುಂದುವರೆಸಲಾರದೆ ತನ್ನ ಕ್ಯಾಬಿನ್ನಿಗೆ ಹೊರಟು ಹೋದ. ಹೌದು, ನಾನೀಗ ಮೊದಲಿನಂತಿಲ್ಲ ಎಂಬ ಸತ್ಯ ನನಗೆ ಕೆಲವು ದಿನಗಳಿಂದೀಚೆಗೆ ಅನ್ನಿಸತೊಡಗಿತ್ತು. ನಾನು ತುಂಬಾ ಖುಷಿಯಾಗಿ ಅಪ್ಪಿಕೊಂಡ ಈ ಊರು ತುಂಬಾ ಹಠಕ್ಕೆ ಬಿದ್ದು ತೆರೆದ ನನ್ನ ಕನಸಿನ ಆಫೀಸು ಯಾಕೋ ಅಪ್ಪ ಹೋದಾಗಿನಿಂದ ಎಲ್ಲವೂ ಶೂನ್ಯ ಅಂತ ಅನ್ನಿಸತೊಡಗಿತು. ನಮ್ಮ ಹಳ್ಳಿಗೆ ವಾಪಸ್ಸು ಹೊರಟು ಹೋಗೋಣ ಅಂತ ಮನಸ್ಸು ಬಲವಾಗಿ ತನ್ನ ವಾದವನ್ನು ನನ್ನ ಹೃದಯದ ಮುಂದಿಡುತ್ತಲೇ ಇತ್ತು. ಅದಕ್ಕೆ ಕಾರಣ ಅಪ್ಪನ ಸಾವಿನ ಘಟನೆ ನನ್ನ ಮನದೊಳಗೆ ಇಣುಕಿ ಇಣುಕಿ ನನ್ನನ್ನು ಘಾಸಿ ಮಾಡತೊಡಗಿತ್ತು. ಆದರೆ ನನಗೆ ಯಾವ ನಿರ್ಧಾರವನ್ನು ಆ ಕ್ಷಣಕ್ಕೆ ತೆಗೆದುಕೊಳ್ಳಲಾಗುತ್ತಿರಲಿಲ್ಲ. ಹೇಗಾದರೂ ಆ ಘಟನೆಯನ್ನು ಮರೆಯೋಣವೆಂದರೂ